**ಗುಂಡ:** ಜೀವನದ ಬಗ್ಗೆ ನಾಲ್ಕು ಮಾತಾಡು?
**ಮಂಡ:** ಎರಡು ಜನ ಎತ್ತಿಕೊಂಡ್ರೆ ಮುಖಂಡ. ನಾಲ್ಕು ಜನ ಎತ್ತಿ ಕೊಂಡ್ರೆ ತೀರ್ಕೊಂಡ. ಇಷ್ಟೇ ಜೀವನ!

***

**ಹೆಂಡತಿ:** ರೀ, ನಮ್ಮ ಮದುವೆ ಆಗಿ ಇವತ್ತಿಗೆ ಐದು ವರ್ಷ ಆಯ್ತು!
**ಗಂಡ:** ಹೌದಾ? ಮತ್ತೆ ಚುನಾವಣೆ ಮಾಡುವ ಅವಕಾಶ ಏನಾದ್ರೂ ಇದ್ಯಾ? ಅಥವಾ ಇದೇ ಸರ್ಕಾರ ಮುಂದುವರೆಯುತ್ತಾ?

***

**ಹೆಂಡತಿ:** ನಾನು ಯಾವುದಾದರು ಕೆಲಸ ಶುರು ಮಾಡಿದ್ರೆ, ಅದರಲ್ಲೇ ಮುಳುಗಿ ಹೋಗ್ತೀನಿ.
**ಗಂಡ:** ಹಾಗಾದರೆ ನೀನು ಯಾಕೆ ಬಾವಿ ತೋಡ್ಬಾರದು?

***

**ಬಾಸ್:** ನಾನು ನಿಮಗೆ ಫೋನ್ ಮಾಡಿದ್ದೆ. ನಿಮ್ಮ ಹೆಂಡತಿ ಫೋನ್ ಸ್ವೀಕರಿಸಿ, 'ನೀವು ಅಡುಗೆ ಮಾಡುತ್ತಿದ್ದೀರಿ' ಎಂದು ಹೇಳಿದರು. ನೀವು ಪುನಃ ನನಗೆ ಯಾಕೆ ಕರೆ ಮಾಡಲಿಲ್ಲ?
**ಸಹೋದ್ಯೋಗಿ:** ಸರ್ ಐದು ನಿಮಿಷದಲ್ಲೇ ರಿಟರ್ನ್ ಫೋನ್ ಮಾಡಿದ್ದೆ. ನಿಮ್ಮ ಹೆಂಡತಿ ಫೋನ್ ಸ್ವೀಕರಿಸಿ 'ನೀವು ಬಟ್ಟೆ ಒಗೆಯುತ್ತಿದ್ದೀರಿ' ಎಂದು ಹೇಳಿದರು. ಅದಕ್ಕೆ 'ಹೋಗ್ಲಿ ಬಿಡಿ ಮೇಡಂ, ನಾನು ಫೋನ್ ಮಾಡಿದ್ದೆ ಅಂತ ಬಾಸ್‌ಗೆ ಹೇಳಬೇಡಿ' ಅಂತ ಅವರಿಗೆ ಹೇಳಿದ್ದೆ!

***

**ಮಾಸ್ತರು:** ಲೋ ಗುಂಡ, ಕಳ್ಳರಲ್ಲಿ ಎಷ್ಟು ವಿಧ?
**ಗುಂಡ:** ಎರಡು ವಿಧ ಸರ್. ಸಾಮಾನ್ಯ ಕಳ್ಳ, ರಾಜಕೀಯ ಕಳ್ಳ. ಸಾಮಾನ್ಯ ಕಳ್ಳ ನಿಮ್ಮ ಹಣ, ವಾಚ್, ಪರ್ಸು ಹಾಗೂ ಮೊಬೈಲ್ ಫೋನ್ ಕದಿಯುತ್ತಾನೆ. ರಾಜಕೀಯ ಕಳ್ಳ ನಿಮ್ಮ ಭವಿಷ್ಯ, ಕನಸು, ಕೆಲಸ, ಆರೋಗ್ಯ, ಆಯಸ್ಸು ಶಿಕ್ಷಣ ಮತ್ತು ಖುಷಿಯನ್ನು ಕದಿಯುತ್ತಾನೆ. ಆದರೆ ಸಾಮಾನ್ಯ ಕಳ್ಳ ನಿಮ್ಮನ್ನು ಆಯ್ಕೆ ಮಾಡುತ್ತಾನೆ. ರಾಜಕೀಯ ಕಳ್ಳನನ್ನು ನೀವು ಆಯ್ಕೆ ಮಾಡುತ್ತೀರಿ ಅಷ್ಟೇ ವ್ಯತ್ಯಾಸ.

***

ಗಂಡ ಹೆಂಡತಿ ಮಧ್ಯೆ ಜಗಳವಾಯಿತು. ಅರ್ಧ ದಿನ ಮೌನವಾಗಿ ಕಳೆದ ನಂತರ...
**ಹೆಂಡತಿ:** ನೀವು ಸ್ವಲ್ಪ ರಾಜಿ ಮಾಡಿಕೊಳ್ಳಿ, ಸ್ವಲ್ಪ ನಾನು ಮಾಡಿಕೊಳ್ಳುವೆ.
**ಗಂಡ:** ಸರಿ ಏನು ಮಾಡಬೇಕು?
**ಹೆಂಡತಿ:** ನೀವು ಕ್ಷಮೆ ಕೇಳಿ, ನಾನು ಕ್ಷಮಿಸುತ್ತೇನೆ!

***

**ಅವಳು:** ಮದುವೆಯಾದ ಬಳಿಕ ನಿಮ್ಮ ಅಳಿಯ ಹಾಗೂ ಮಗ ಹೇಗಿದ್ದಾರೆ?
**ಇವಳು:** ಅಳಿಯ ತುಂಬ ಒಳ್ಳೆಯವನು. ಎಲ್ಲ ಸಂಬಳ ಮಗಳ ಕೈಯಲ್ಲಿ ತಂದು ಕೊಡುತ್ತಾನೆ. ಆದರೆ, ಮಗ ಹಾಗಿಲ್ಲ. ತುಂಬ ಕೆಟ್ಟವನು. ಎಲ್ಲ ಸಂಬಳವನ್ನು ಸೊಸೆಯ ಕೈಗೆ ಕೊಡುತ್ತಾನೆ!

***

**ಬ್ಯಾಂಕ್ ಸಿಬ್ಬಂದಿ:** ಮಂಜಪ್ಪ, ನಿಮ್ಮ ಪಾನ್ ತಿಳಿಸಿ?
**ಮಂಜಪ್ಪ:** ಎರಡು ಕಲ್ಕತ್ತ ಎಲೆ, ಮೂರು




**'ಚೆನ್ನಾಗಿ ಓದಿ ಅಂತ ಬಲವಂತ ಮಾಡಬೇಡಿ, ಓದಿ ಮೂರ್ಕಾಸಿನ ಉದ್ಯೋಗ ಮಾಡೋದಕ್ಕಿಂತ ಓದದೇ ನಾವೆಲ್ಲರೂ ಮಂತ್ರಿ, ಮುಖ್ಯಮಂತ್ರಿ, ಪ್ರಧಾನಮಂತ್ರಿ ಆಗಬೇಕು' ಅಂತ ಕನಸು ಕಾಣುತ್ತಾ ಇದ್ದೀವಿ ಸರ್!**

ಹಾಲಾಡಿ ಕೆ, ಚಮನ್, ಏಲಕ್ಕಿ, ಲವಂಗ, ಸ್ವಲ್ಪ ಜಾಸ್ತಿ ಗುಲ್ಕನ್ ಮತ್ತು ಒಂಚೂರು ಸುಣ್ಣ ಅಷ್ಟೇ.

***

**ಗಂಡ:** ಪಕ್ಕದ ಮನೆಯವರು ಕಾಂಗ್ರೆಸ್ ಅಲ್ಲ. ಆಮ್ ಆದ್ಮಿ ಪಕ್ಷದವರು.
**ಹೆಂಡತಿ:** ಅದು ಹೇಗೆ ಗೊತ್ತಾಯಿತು ನಿಮಗೆ?
**ಗಂಡ:** ನಾನು ಕೈ ಎತ್ತಿ ತೋರಿಸಿದಾಗ, ಅವಳು ಪೊರಕೆ ಎತ್ತಿ ತೋರಿಸಿದಳು!

***

**ಹೋಟೆಲ್ ಮಾಲೀಕ:** ಡಾಕ್ಟರ್, ವಿಪರೀತ ತಲೆನೋವು ಯಾವುದಾದರೊಂದು ಮಾತ್ರೆ ಕೊಡಿ?
**ಡಾಕ್ಟರ್:** ಇವತ್ತು ನನಗೂ ವಿಪರೀತ ತಲೆನೋವು.
**ಹೋಟೆಲ್ ಮಾಲೀಕ:** ಹಾಗಾದರೆ, ನೀವೂ ಯಾವುದಾದರೊಂದು ಮಾತ್ರೆ ತೆಗೆದುಕೊಳ್ಳಿ!

***

**ಪತ್ನಿ:** ರಿ, ಈ ಬೆಳದಿಂಗಳು ಎಂಥವರನ್ನೂ ಮೈ ಮರೆಸುತ್ತೆ ಅಲ್ಲವೇ?
**ಪತಿ:** ಹೌದು, ಇಂಥ ಬೆಳದಿಂಗಳಲ್ಲೇ ಮೈಮರೆತು, 'ನಾನು ನಿನ್ನ ಮದುವೆಯಾಗುತ್ತೇನೆ' ಎಂದು ಮಾತು ಕೊಟ್ಟಿದ್ದು!

***

**ವ್ಯಕ್ತಿ:** ನೀವೇನೋ ಕುಡಿತ ಬಿಡಿಸಿದಿರಿ. ಆದರೆ ಈಗ ಮತ್ತೆ ಕುಡಿಯೋ ಪರಿಸ್ಥಿತಿ ಬಂದಿದೆ.
**ಡಾಕ್ಟರ್:** ಯಾಕೆ ಏನಾಯ್ತು?
**ವ್ಯಕ್ತಿ:** ಟ್ರೀಟ್‌ಮೆಂಟ್ ವೇಳೆ ಸಹಾಯ ಮಾಡಿದ ನಿಮ್ಮ ಆಸ್ಪತ್ರೆಯ ನರ್ಸ್ ಅನ್ನು ಮರೆಯುವುದಕ್ಕೆ ಆಗುತ್ತಿಲ್ಲ. ಅದಕ್ಕೆ!

***

**ಆಕೆ:** ಮನೆಯಲ್ಲಿ ಗುಂಡ ಮತ್ತು ರಂಗ ಎಂಬ ಇಬ್ಬರು ಹುಡುಗರನ್ನ ನೋಡಿದ್ದಾರೆ. ಅವರಲ್ಲಿ ಯಾರನ್ನು ಮದುವೆಯಾದರೆ ನನ್ನ ಭವಿಷ್ಯ ಚೆನ್ನಾಗಿರುತ್ತದೆ?
**ಜ್ಯೋತಿಷಿ:** ನೋಡಮ್ಮಾ, ನೀನು ಗುಂಡನನ್ನು ಮದುವೆಯಾದರೆ ರಂಗ ಅದೃಷ್ಟವಂತ, ರಂಗನನ್ನು ಮದುವೆಯಾದರೆ ಗುಂಡ ಅದೃಷ್ಟವಂತ. ಒಟ್ಟಿನಲ್ಲಿ ನೀನು ಅದೃಷ್ಟವಂತೆ!

***

**ಮೊಮ್ಮಗ:** ತಾತ, ತಾತ ನೀನು ಒಂದೇ ಒಂದು ಸಲ ಕಣ್ಣು ಮುಚ್ಚು?
**ತಾತ:** ಯಾಕೆ, ಬಂಗಾರ?
**ಮೊಮ್ಮಗ:** 'ತಾತ ಕಣ್ಣು ಮುಚ್ಚಿದರೆ ನಮಗೆ ಹಣ ಆಸ್ತಿ ಎಲ್ಲ ಸಿಗುತ್ತೆ' ಅಂತ ಅಮ್ಮ ಹೇಳ್ತಾ ಇದ್ದರು ಅದಕ್ಕೆ!

ಸಂಗ್ರಹ: **ಶಂಕರೇಗೌಡ ತುಂಬಕೆರೆ, ಮಂಡ್ಯ**

**ಗುಂಡ:** ಡಾಕ್ಟ್ರೆ, ಪ್ರಿಸ್ಕ್ರಿಪ್ಷನ್‌ನ ಮೂಲೆಯಲ್ಲಿ ನೀವು ಬರೆದಿರುವ ಔಷಧಿ ಮುಂಬೈನ ಮೂಲೆ ಮೂಲೆ ಹುಡುಕಿದರೂ ಸಿಗಲಿಲ್ಲ. ನೀವೆ ತರಿಸಿಕೊಡಿ.
**ಡಾಕ್ಟ್ರೆ:** ಲೋ ಗುಂಡ ಅದು ಔಷಧಿಯ ಹೆಸರಲ್ಲ. ಪೆನ್ನು ಸರಿಯಾಗಿ ಬರೆಯದಿದ್ದಕ್ಕೆ ಎಡಬದಿಯಲ್ಲಿ ಗೀಚಿದ್ದು!
**ರೋಗಿ:** ಹಾಗಾದ್ರೆ ಒಬ್ಬ, 'ಈ ಔಷಧಿಯನ್ನು ನಾಳೆ ತರಿಸಿಕೊಡುತ್ತೇನೆ' ಎಂದ. ಇನ್ನೊಬ್ಬ, 'ಈ ಔಷಧಿಯ ಕಂಪನಿ ಮುಚ್ಚಿದೆ. ಬದಲಿ ಔಷಧಿ ಕೊಡುತ್ತೇನೆ' ಎಂದ. ಮತ್ತೊಬ್ಬ, 'ಈ ಔಷಧಕ್ಕೆ ತುಂಬ ಬೇಡಿಕೆ ಇದೆ. ಬ್ಲಾಕ್‌ನಲ್ಲಿ ತರಿಸಿಕೊಡುತ್ತೇನೆ. ಜಾಸ್ತಿ ಖರ್ಚಾಗುತ್ತೆ' ಎಂದ. ಕಡೆಯದಾಗಿ ಒಬ್ಬ, 'ಇದು ಕ್ಯಾನ್ಸರ್‌ಗೆ ನೀಡುವ ಔಷಧಿ. ನಿಮ್ಮ ಮನೆಯಲ್ಲಿ ಯಾರಿಗಾದರು ಕ್ಯಾನ್ಸರ್ ಇದೀಯಾ' ಎಂದು ಕೇಳಿದ!

***

**ಮೇಷ್ಟ್ರು:** ಪರೀಕ್ಷೆ ಹತ್ತಿರ ಬರುತ್ತಿದೆ. ಏನಾದ್ರು ಡೌಟ್ ಇದ್ದರೆ ಕೇಳಿ?
**ವಿದ್ಯಾರ್ಥಿ:** ಪ್ರಶ್ನೆ ಪತ್ರಿಕೆ ಪ್ರಿಂಟ್ ಎಲ್ಲಿ ಸಿಗುತ್ತದೆ?

ಸಂಗ್ರಹ: **ಸಿಹಿಮೊಗೆ ರಮೇಶ್, ಮೈಸೂರು**